## **ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

## **ಸಿ.ಸಿ.ನಂ.31/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪರಶುರಾಮ ತಿಪ್ಪಣ್ಣನವರ | ಸಿಡಬ್ಲ್ಯೂ | 11 |
| ತಂದೆಯ ಹೆಸರು | ಬಸವರಾಜ | ಪಿಡಬ್ಲ್ಯೂ | 9 |
| ವಯಸ್ಸು | 40 ವರ್ಷ | | |
| ಉದ್ಯೋಗ | ಪೊಲೀಸ ಪೇದೆ, ಆಂತರಿಕ ಭದ್ರತೆ ವಿಭಾಗ ಹಾವೇರಿ | | |
| ವಾಸಸ್ಥಳ | ಹಾವೇರಿ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು 2018 ರಿಂದ 2022 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 21.11.2019 ರಂದು ಚಾ.ಸಾ-17 ಅವರ ಜೊತೆಯಾಗಿ ಇಲಾಖಾ ಜೀಪಿನಲ್ಲಿ ನಾನು ಮತ್ತು ಚಾ.ಸಾ-7,9 ರಿಂದ 11 ಎಲ್ಲರೂ ಸೇರಿ ಠಾಣೆಯನ್ನು ಬೆಳಗಿನ 10-00 ಘಂಟೆಗೆ ಹೊರಟು ಪೆಟ್ರೋಲ್ ಡ್ಯೂಟಿ ಮಾಡಿ ಮಧ್ಯಾಹ್ನ 12-00 ಘಂಟೆಗೆ ಗುತ್ತಲ ಬ್ರಿಡ್ಜ ಹತ್ತಿರ ಇದ್ದಾಗ ಒಟ್ಟು 4 ಜನ ಎರಡು ಗಾಡಿಯಲ್ಲಿ ಗುತ್ತಲ ಕಡೆಯಿಂದ ಹಾವೇರಿ ಕಡೆಗೆ ಬರುತ್ತಿದ್ದರು. ನಂತರ 4 ಜನ ವ್ಯಕ್ತಿಗಳು ತಮ್ಮ ಮೋಟಾರ ಸೈಕಲಗಳನ್ನು ನಮ್ಮ ಜೀಪನ್ನು ಬಿಟ್ಟು ಓಡಿಹೋಗಲು ಪ್ರಯತ್ನಿಸಿರುತ್ತಾರೆ. ನಾನು ನವೀನ ಬಾರ್ಕೇರ ಈತನನ್ನು ಹಿಡಿದುಕೊಂಡು ಬಂದಿದ್ದೇನೆ, ಆತನನ್ನು ನೋಡಿದರೆ

ಗುರುತಿಸಬಲ್ಲೆ. ಆತನು ನ್ಯಾಯಾಲಯದೇ ಮುಂದೆ ಇರುವ 4 ನೇ ಆರೋಪಿಯಾಗಿರುತ್ತಾನೆ . ಇನ್ನು ಉಳಿದ ಮೂರು ಜನ ವ್ಯಕ್ತಿಗಳನ್ನು ನನ್ನ ಸಹ ಸಿಬ್ಬಂದಿಗಳು ಹಿಡಿದುಕೊಂಡು ಬಂದಿರುತ್ತಾರೆ.

2) ನಂತರ ನಾವು ಜನ 4 ಜನ ವ್ಯಕ್ತಿಗಳನ್ನು ಪೊಲೀಸ ಠಾಣೆಯ ಹಿಡಿದುಕೊಂಡು ಬಂದಾಗ ಒಂದು ಅಂಗಡಿಯ ಮುಂದೆ ನಿಲ್ಲಿಸಿದ ಕಳ್ಳತನ ಮಾಡಿಕೊಂಡು ಬಂದು ಅದನ್ನು ಮಾರಾಟ ಮಾಡಲು ಒಂದು ಸ್ಥಳದಲ್ಲಿ ಮುಚ್ಚಿ ಇಟ್ಟಿರುತ್ತೇವೆ. ಎಂದು ತಿಳಿಸಿರುತ್ತಾರೆ. ಆ ಪ್ರಕರಣವು ಹಾವೇರಿಯ ಶಹರ ಪೊಲೀಸ ಠಾಣೆಯ ಗುನ್ನಾ ನಂಬರಃ 83/2019 ರಲ್ಲಿ ನೊಂದಣಿಯಾಗಿರುತ್ತದೆ. ನಂತರ 4 ಜನ ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಚಾ.ಸಾ-17 ಇವರು ವಿಚಾರಣೆ ಮಾಡಿದಾಗ 4 ಜನ ವ್ಯಕ್ತಿಗಳು ನಾವು ಕಳ್ಳತನ ಮಾಡಿಕೊಂಡು ಬಂದಂತಹ ಮೋಟಾರ ಸೈಕಲಗಳನ್ನು ಬಚ್ಚಿಟಟ ಸ್ಥಳಗಳನ್ನು ತೋರಿಸುತ್ತೇವೆ ಎಂದು ಚಾ.ಸಾ-17 ಇವರಿಗೆ ತಿಳಿಸಿರುತ್ತಾರೆ.

4) ನಂತರ ಚಾ.ಸಾ-17 ನಾನು ಮತ್ತು ನನ್ನ ಸಹ ಸಿಬ್ಬಂದಿಗಳು ನಮ್ಮ ಇಲಾಖಾ ಜೀಪಿನಲ್ಲಿ ಪಂಚರನ್ನು ಕರೆದುಕೊಂಡು ಮತ್ತು ಆರೋಪಿತರನ್ನು ಕರೆದುಕೊಂಡು ಎರಡು ಮೋಟಾರ ಸೈಕಲಗಳನ್ನು ಪೊಲೀಸ ಠಾಣೆಗೆ ತಂದು ಜಪ್ತು ಪಂಚನಾಮೆ ಮಾಡಿದ್ದೇವೆ. ನಂತರ ಆರೋಪಿಗಳು ತೋರಿಸಿದ ಸ್ಥಳಕ್ಕೆ ಹೋಗುವಾಗ ಹಾವೇರಿಯ ಶಹರ ಪೊಲೀಸ ಠಾಣಾ ಗುನ್ನಾ ನಂಬರಃ 83/2019 ಮತ್ತು 49/2019 ಸ್ಥಳವನ್ನು ತೋರಿಸಿರುತ್ತಾರೆ ಮತ್ತು 4 ಜನ ವ್ಯಕ್ತಿಗಳು ಆ ಸ್ಥಳದಿಂದ ಮೋಟಾರ ಸೈಕಲಗಳನ್ನು ತಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ 4 ಜನ ಆರೋಪಿಗಳು ಅಜ್ಜಯ್ಯನ ಗದ್ದಿಗೆ ಹತ್ತಿರ ಇರುವಂತಹ ಮುಳ್ಳಿನ ಕಂಟಿಯ ಬಳಿ ಅವರು ಮೋಟಾರ ಸೈಕಲಗಳನ್ನು ಬಚ್ಚಿಟ್ಟು ನಂತರ ಅವುಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ನಮಗೆ ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ಒಟ್ಟು 7 ಮೋಟಾರ ಸೈಕಲಗಳು ಇರುವದು

ಕಂಡು ಬಂದಿರುತ್ತದೆ. ನಂತರ ಆ ಎಲ್ಲ 7 ಮೋಟಾರ ಸೈಕಲಗಳನ್ನು ಒಂದು ವಾಹನದಲ್ಲಿ ಹಾಕಿಕೊಂಡು ನಾವು ನಮ್ಮ ಸಹ ಸಿಬ್ಬಂದಿಯ ಜೊತೆಗೆ ನಮ್ಮ ಪೊಲೀಸ ಠಾಣೆಗೆ ತಂದಿದ್ದೆವೆ. ನಂತರ 4 ಜನ ಆರೋಪಿಗಳು ಹಾವೇರಿಯ ಎಂ.ಜಿ ರೋಡನಲ್ಲಿ ಇನ್ನೊಂದು ಕಳ್ಳತನ ಮಾಡಿದ  ಗಾಡಿಯನ್ನು ವಿಕ್ರಂ ಎನ್ನುವ ವ್ಯಕ್ತಿಗೆ ಮಾರಾಟ ಮಾಡಿರುತ್ತೇವೆ, ಆ ಸ್ಥಳ ತೋರಿಸುತ್ತೇವೆ ಎಂದು ನಮಗೆ ತಿಳಿಸಿದ ಪ್ರಕಾರ ನಾವು ಆ ಸ್ಥಳಕ್ಕೆ ಹೋಗಿದ್ದೇವೆ.

ನಂತರ ಸದರಿ ಸ್ಥಳದಲ್ಲಿ ಒಂದು ಪಂಚನಾಮೆ ಮಾಡಿದ್ದೇವೆ. ನಂತರ ಆರೋಪಿಗಳು ಇನ್ನೂ 6 ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ್ದೇವೆ ನಂತರ ಅವುಗಳನ್ನು ಗುಜರಿಯ ಅಂಗಡಿಗೆ ಕೊಟ್ಟಿದ್ದೇವೆ, ಆ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದಾಗ ಸದರಿ ಗುಜರಿ ಅಂಗಡಿಗೆ ನಾವು ಹೋಗಿರುತ್ತೇವೆ. ನಂತರ 4 ಜನ ಆರೋಪಿಗಳು ಉಳಿದ 6 ಮೋಟಾರ ಸೈಕಲಗಳನ್ನು ಇರ್ಷಾದ ಮತ್ತು ಅವರ ತಂದೆಯಾದಂತಹ ಮಕ್ಸೂದ ಅಹ್ಮದ ಇವರಿಗೆ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ. ಆ ಸ್ಥಳದಲ್ಲಿ ನಾವು ನೋಡಿದಾಗ ಒಂದು ಹಿರೋ ಹೊಂಡಾ ಮೋಟಾರ ಸೈಕಲ ಇರುತ್ತದೆ, ಅದಕ್ಕೆ ನಂಬರ ಪ್ಲೇಟ ಇರುವದಿಲ್ಲ. ನಂತರ ಇರ್ಷಾದ ಈತನನ್ನು ವಿಚಾರಣೆ ಮಾಡಿದಾಗ ನಮ್ಮ ಪೊಲೀಸ ಠಾಣೆಗೆ ಸಂಬಂದಪಟ್ಟ ಪ್ರಕರಣಗಳ 5 ಮೋಟಾರ ಸೈಕಲಗೆ ಸಂಬಂದಪಟ್ಟಂತಹ 6 ಚಕ್ರಗಳು ಸಿಕ್ಕಿರುತ್ತವೆ, ಅದೇ ರೀತಿ 5 ನಂಬರ ಪ್ಲೇಟಗಳು ಸಹ ಇರ್ಷಾದ ಎನ್ನುವವರ ಗುಜರಿ ಅಂಗಡಿಯಲ್ಲಿ ಸಿಕ್ಕಿರುತ್ತವೆ. ನಂತರ ಅವುಗಳನ್ನು ನಮ್ಮ ವಶಕ್ಕೆ ಪಡೆದಿದ್ದೇವೆ.

ನಂತರ ಇರ್ಷಾದ ಎನ್ನುವ ವ್ಯಕ್ತಿಯನ್ನು ವಿಚಾರಣೆ ಮಾಡಿ ಚಾ.ಸಾ–17 ಇವರು ದಸ್ತಗಿರಿ ಮಾಡಿರುತ್ತಾರೆ. ನಂತರ ಮಾರನೇ ದಿವಸ ಬೆಳಗಿನ 5–30 ಘಂಟೆಗೆ ನಾನು ಹಾಗೂ ನನ್ನ ಸಹ ಸಿಬ್ಬಂದಿ ಮತ್ತು ಚಾ.ಸಾ–17 ಹಾಗೂ 4 ಜನ ಆರೋಪಿಗಳು ನಮ್ಮ ಇಲಾಖಾ ಜೀಪಿನಲ್ಲಿ ಇನ್ನೂ ತಾವು ಮೋಟಾರ

ಸೈಕಲನ್ನು ಕಳ್ಳತನ ಮಾಡಿದ ಸ್ಥಳಗಳನ್ನು ತೋರಿಸುತ್ತೇವೆ ಎಂದು ಹೇಳಿದಾಗ ಅವರ ಜೊತೆ ನಾವು ಹೋಗಿದ್ದೇವೆ. ನಂತರ ಈ ಪ್ರಕರಣದ ಕುರಿತಾಗಿ ಹಾವೇರಿಯ ದಾನೇಶ್ವರಿ ನಗರದಲ್ಲಿ ಇರುವಂತಹ ಅವರು ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದಾಗ ಅಲ್ಲಿ ಪಂಚನಾಮೆ ಮಾಡಿದ್ದೇವೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಂಬರಪ್ಲೇಟಗಳು ಹಾಗೂ ಚಕ್ರಗಳನ್ನು ನಮ್ಮ ವಶಕ್ಕೆ ಪಡೆದಿದ್ದೇವೆ. ನಾನು ಹಿಡಿದುಕೊಂಡಂತಹ ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ಆತನು ಈ ಪ್ರಕರಣದಲ್ಲಿ 2 ನೇ ಆರೋಪಿಯಾಗಿದ್ದಾನೆ. ಅದೇ ರೀತಿ ಇರ್ಷಾದ ಈತನನ್ನು ನೋಡಿದರೆ ಗುರುತಿಸಬಲ್ಲೆ , ಆತನು ಈ ದಿವಸ ನ್ಯಾಯಾಲಯದ ಮುಂದೆ ಇದ್ದು, ಆತನು ಈ ಪ್ರಕರಣದಲ್ಲಿ 5 ನೇ ಆರೋಪಿಯಾಗಿರುತ್ತಾನೆ.

**<u>ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರಿಂದಃ 5 ಮತ್ತು 6 ನೇ ಆರೋಪಿ ಪರವಾಗಿಃ</u>**

6) ನಾನು ಚಾ.ಸಾ–17 ಇವರ ಜೊತೆ ಪೆಟ್ರೋಲಿಂಗಗೆ ಹೋದ ದಿವಸ ಹೇಳಲು ಬರುವದಿಲ್ಲ. ನಾವು ಪೆಟ್ರೋಲಿಂಗ ಹೋಗುವ ಹಿಂದಿನ ದಿವಸ ರಾತ್ರಿ ಕಳ್ಳತನವಾದ ಮೋಟಾರ ಸೈಕಲಗಳ ಪತ್ತೆ ಹಚ್ಚುವ ಕಾರ್ಯಕ್ಕೆ ನೇಮಿಸಲಾಗಿತ್ತು. ಅದೇ ರೀತಿ ನನ್ನ ಜೊತೆ ಉಳಿದ ಸಹ ಸಿಬ್ಬಂದಿಗಳನ್ನು ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ ವ್ಯಕ್ತಿಗಳ ಪತ್ತೆಗಾಗಿ ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು. ಸದರಿ ವಿಷಯದ ಕುರಿತಾಗಿ ಎಸ್.ಹೆಚ್.ಒ ಡೈರಿಯಲ್ಲಿ ಬರೆದಿರುತ್ತಾರೆ, ನಾನು ಎಸ್.ಹೆಚ್.ಒ ಡೈರಿಯನ್ನು ನಾನು ಸ್ವತಃ ನೋಡಿರುತ್ತೇನೆ. ಎಸ್.ಹೆಚ್.ಒ ಡೈರಿಯಲ್ಲಿ ನನಗೆ ಕೆಲಸಕ್ಕೆ ನೇಮಿಸಿದ ಬಗ್ಗೆ ಮಾತ್ರ ಗೊತ್ತಿರುತ್ತದೆ, ಉಳಿದ ಸಿಬ್ಬಂದಿಗಳನ್ನು ಯಾವ ಯಾವ ಕರ್ತವ್ಯಕ್ಕೆ ನೇಮಿಸಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ.

7) ನಮ್ಮನ್ನು ನೋಡಿ 4 ಜನ ವ್ಯಕ್ತಿಗಳು ನಮ್ಮ ಜೀಪಿನಿಂದ 50 ಪೀಟ ಅಂತರದಲ್ಲಿ ಅವರು ತಂದಿದ್ದ ಮೋಟಾರ ಸೈಕಲಗಳನ್ನು ಬಿಟ್ಟು ಓಡಿಹೋಗಿರುತ್ತಾರೆ. ಆ ರೀತಿ ಬಿದ್ದಂತಹ ಎರಡು ಮೋಟಾರ ಸೈಕಲಗಳಿಗೆ ಯಾವುದೇ ರೀತಿ ಜಖಂಗಳು ಆಗಿರುವದಿಲ್ಲ. ಆ ರೀತಿ ಎರಡು ಮೋಟಾರ ಸೈಕಲಗಳನ್ನು ಒಗೆದು 4 ಜನ ವ್ಯಕ್ತಿಗಳು ಗುತ್ತಲದ ಕಡೆಗೆ ಓಡಿ ಹೋಗಿರುತ್ತಾರೆ. ಆ ರೀತಿ ಗುತ್ತಲದ ಕಡೆಗೆ ಓಡಿಹೋದ 4 ಜನ ವ್ಯಕ್ತಿಗಳು ನಾವು 4 ಜನ ಸಿಬ್ಬಂದಿಗಳು ಓಡಿಹೋಗಿದ್ದೇವೆ. ಅದೇ ರೀತಿ ಚಾ.ಸಾ–7 ಸಾಗರ ಇವರು ಸಹ ನಮ್ಮ ಜೊತೆ ಬಂದಿರುತ್ತಾರೆ. ಆ ಸಮಯದಲ್ಲಿ ನಾವು ಸಮವಸ್ತ್ರ ಧರಿಸಿರಲಿಲ್ಲ. ಆ ರೀತಿ ನಾವು ಓಡಿ ಹೋದ ಬಳಿಕ ಅವರು ಮೋಟಾರ ಸೈಕಲ ಬಿಟ್ಟ ಸ್ಥಳದಿಂದ 50 ಮೀಟರ ಅಂತರದಲ್ಲಿ ನಮಗೆ ಸಿಕ್ಕಿರುತ್ತಾರೆ.

8) 4 ಜನ ವ್ಯಕ್ತಿಗಳು ಬಿಟ್ಟುಹೋದಂತಹ ಮೋಟಾರ ಸೈಕಲನ ಸ್ಥಳದಲ್ಲಿ ಚಾ.ಸಾ–17 ನಮ್ಮ ಮೇಲಾಧಿಕಾರಿಯು ಪಂಚನಾಮೆ ಮಾಡಿರುತ್ತಾರೋ, ಇಲ್ಲವೋ ಎಂದು ನನಗೆ ನೆನಪಿರುವದಿಲ್ಲ. ನಾವು ಪೆಟ್ರೋಲಿಂಗ ಡ್ಯೂಟಿಗೆ ತೆಗೆದುಕೊಂಡು ಹೋದಂತಹ ಜೀಪು 9 ಜನ ಸಿಬ್ಬಂದಿಗಳಿಗೆ ಸಾಕಾಗುವಷ್ಟು ಸ್ಥಳ ಇತ್ತು. ಸದರಿ ಜೀಪಿನಲ್ಲಿ ಮುಂದಿನ ಸೀಟಿನಲ್ಲಿ ಚಾ.ಸಾ–17 ಇವರು ಕುಳಿತುಕೊಂಡಿದ್ದರು. ಅದರ ಹಿಂದಿನ ಸೀಟಿನಲ್ಲಿ 4 ಜನ ಕುಳಿತುಕೊಂಡಿದ್ದರು. ನಾವು ಪೆಟ್ರೋಲಿಂಗ ತೆಗೆದುಕೊಂಡು ಹೋದ ಜೀಪಿನ ಕೆಪ್ಯಾಸಿಟಿ ಎಷ್ಟು ಇತ್ತು ಎಂದು ನನಗೆ ಗೊತ್ತಿರುವದಿಲ್ಲ. ನಾವು ಜೀಪಿನಲ್ಲಿ ಹಾಗೂ 4 ಜನ ಆರೋಪಿಗಳನ್ನು ಮೋಟಾರ ಸೈಕಲ ಮೇಲೆ ಒಟ್ಟು ಎಲ್ಲರೂ ಸೇರಿ 9 ಜನ ನಮ್ಮ ಪೊಲೀಸ ಠಾಣೆಗೆ ಬಂದಿರುತ್ತೇವೆ.

8) ಚಾಸಾ–17 ಇವರು ಪೊಲೀಸ ಠಾಣೆಯಲ್ಲಿ ಮಾಡಿದ ಜಪ್ತು ಪಂಚನಾಮೆಯಲ್ಲಿ ಮೋಟಾರ ಸೈಕಲಗಳ ಚಸ್ಸಿನ ನಂಬರ, ಇಂಜಿನ ನಂಬರ,

ಚಕ್ರದ ನಂಬರ ಮತ್ತು ರಿಮ್ ನಂಬರ ಬರೆಸಿರುವದಿಲ್ಲ. ಅದೇ ರೀತಿ ನಮ್ಮ ಪೊಲೀಸ ಠಾಣೆಗೆ ತಂದಂತಹ ಮೋಟಾರ ಸೈಕಲಗೆ ಕನ್ನಡಿ ಇತ್ತೋ, ಇಲ್ಲವೋ ಎಂದು ಬರೆಯಿಸಿರುವದಿಲ್ಲ. ಸದರಿ ಪಂಚನಾಮೆಯನ್ನು ಮಾಡುವ ಕಾಲಕ್ಕೆ ಎರಡು ಮೋಟಾರ ಸೈಕಲಗಳ ಮಾಲೀಕರ ಹೆಸರು ಯಾರು ಇರುತ್ತಾರೆ ಎಂದು ತಿಳಿದುಕೊಳ್ಳಲು ಪ್ರಯತ್ನಪಟ್ಟಿರುವದಿಲ್ಲ. ಎರಡು ಮೋಟಾರ ಸೈಕಲಗಳಲ್ಲಿ ಒಂದು ಮೋಟಾರ ಸೈಕಲ ಹಿರೋ ಹೊಂಡಾ ಕಂಪನಿ ಮತ್ತು ಒಂದು ಸುಜುಕಿ ಕಂಪನಿಯದ್ದಾಗಿತ್ತು. ಸದರಿ ಹಿರೋ ಹೋಡಾ ಮೋಟಾರ ಸೈಕಲ್ ಯಾವ ಇಸ್ವಿಯ ಮಾಡಲ್ ಆಗಿರುತ್ತದೆ ಮತ್ತು ಸದರಿ ಸುಜುಕಿ ಸೈಕಲ್ ಯಾವ ವರ್ಷದ ಮಾಡಲ್ ಆಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ಜಪ್ತು ಪಂಚನಾಮೆಗೆ ನಾನು ಸಹಿ ಮಾಡಿರುವದಿಲ್ಲ.

8) ಈ ಎಲ್ಲ ಕೆಲಸವನ್ನು ಮಾಡಿದ್ದರ ಕುರಿತಾಗಿ ಚಾ.ಸಾ-17 ಇವರು ಎಸ್.ಹೆಚ್.ಒ ಡೈರಿಯಲ್ಲಿ ಬರೆದಿರುತ್ತಾರೋ , ಇಲ್ಲವೋ ಎಂದು ನನಗೆ ಗೊತ್ತಿರುವದಿಲ್ಲ. ನಾನು ಚಾ.ಸಾ-17 ಇವರ ಮುಂದೆ ಹೇಳಿಕೆ ಕೊಟ್ಟಾಗ ಅದರಲ್ಲಿ ಬರೆದಿರುವಂತಹ ಮೋಟಾರ ಸೈಕಲ ನಂಬರ ಹಾಗೂ ಯಾವ ಕಂಪನಿಯ ಮೋಟಾರ ಸೈಕಲ ಎಂದು ಆ ಎಲ್ಲ ಮೋಟಾರ ಸೈಕಲ ಈ ಪ್ರಕರಣಕ್ಕೆ ಸಂಬಂದಪಡಲಾರದ ಮೋಟಾರ ಸೈಕಲ ಆಗಿರುತ್ತವೆ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮೋಟಾರ ಸೈಕಲಗಳು ಹಾಗೂ ಅದಕ್ಕೆ ಸಂಬಂದಪಟ್ಟ ಬಿಡಿಭಾಗಗಳು ಈ ಪ್ರಕರಣಕ್ಕೆ ಸಂಬಂದಪಟ್ಟಿದ್ದು ಆಗಿರುವದಿಲ್ಲ ಅಂದರೆ ಸರಿಯಲ್ಲ. ನಾನು ಚಾ.ಸಾ-17 ಇವರ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯನ್ನು ಚಾ.ಸಾ-17 ಇವರ ಮುಂದೆ ಕೊಟ್ಟಿದ್ದು ಆ ಹೇಳಿಕೆಯಲ್ಲಿ ಕಾಣಿಸಿದ ಮೋಟಾರ ಸೈಕಲ ಮಾಡಲ್ ಆಗಲಿ, ಚಸ್ಸಿ ನಂಬರ, ಇಂಜಿನ ನಂಬರ, ಚಕ್ರದ ನಂಬರ ಮತ್ತು ರಿಮ್ ನಂಬರ ಆಗಲಿ ಹೇಳಲು ಬರುವದಿಲ್ಲ ಅಂದರೆ

ಸರಿಯಲ್ಲ. ನಾವು ಇರ್ಷಾದ ಎನ್ನುವವನ ಅಂಗಡಿಗೆ ಹೋದಾಗ ಅಲ್ಲಿ ಸಿಕ್ಕಂತಹ ಮೋಟಾರ ಸೈಕಲ ಮತ್ತು ಮೋಟಾರ ಸೈಕಲ ಬಿಡಿಭಾಗಗಳನ್ನು ವಶಪಡಿಸಿಕೊಳ್ಳುವಾಗ ಜಪ್ತು ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಇರ್ಷಾದ ಇವರ ಗುಜರಿ ಅಂಗಡಿಯಲ್ಲಿ ಸಿಕ್ಕ 5 ನಂಬರ ಪ್ಲೇಟಗಳ ಸಂಖ್ಯೆ ಹೇಳಲು ಬರುವದಿಲ್ಲ. ಅದೇ ರೀತಿ ಇರ್ಷಾದ ಅವರ ಅಂಗಡಿಯಲ್ಲಿ ಸಿಕ್ಕಂತಹ ಮೋಟಾರ ಸೈಕಲನ ಬಿಡಿ ಭಾಗಗಳು ಯಾವ ಕಂಪನಿಯದ್ದು ಎಂದು ನನಗೆ ಹೇಳಲು ಬರುವದಿಲ್ಲ.

9) ಇರ್ಷಾದ ಇವರು ತಮ್ಮ ಗುಜರಿ ಅಂಗಡಿಯಲ್ಲಿ ಒಟ್ಟು ಊರಿನವರು ಅವರಿಗೆ ಬೇಡವಾದ ಕಬಿಣದ ವಸ್ತುಗಳನ್ನು ಮತ್ತು ಮೋಟಾರ ಸೈಕಲ ಬಿಡಿ ಭಾಗಗಳು ತಂದು ಮಾರಾಟ ಮಾಡುತ್ತಾರೆ ಅಂದರೆ ಸರಿ. ನಾವು ಆಟೋಮೊಬೈಲ ಅಂಗಡಿಯಲ್ಲಿ ಇರುವಂತಹ ಮೋಟಾರ ಸೈಕಲನ ಬಿಡಿಭಾಗಗಳನ್ನು ತೆಗೆದುಕೊಂಡು ಅವುಗಳು ಆರೋಪಿಗಳು ಕಳ್ಳತನ ಮಾಡಿದ ಬಿಡಿಭಾಗಗಳು ಆಗಿರುತ್ತವೆ ಎಂದು ಆರೋಪಿಗಳ ವಿರುದ್ಧ ಸುಳುಳ ಪ್ರಕರಣ ದಾಖಲಿಸಿದ್ದೇವೆ ಅಂದರೆ ಸರಿಯಲ್ಲ. ಆರೋಪಿಗಳನ್ನು ಸುಳ್ಳಾಗಿ ಈ ಪ್ರಕರಣದಲ್ಲಿ ಸೇರಿಸಲು ನಾವು ಬೇರೆ ಬೇರೆ ಸ್ಥಳಗಳದಲ್ಲಿ ಮೋಟಾರು ಸೈಕಲ ಸಿಕ್ಕಿರುತ್ತವೆ ಮತ್ತು ಮೋಟಾರು ಸೈಕಲಗಳು ಬಿಡಿಭಾಗಗಳು ಮತ್ತು ನಂಬರ ಪ್ಲೇಟಗಳು ಸಿಕ್ಕಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸ ಠಾಣೆಯಲ್ಲಿ ಒಂದೇ ತರಹದ ಗಣಕೀಕೃತ ಮಾಡಿದ ಹೇಳಿಕೆಗಳನ್ನು ಒದಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ ಈ ಪ್ರಕರಣಕ್ಕೂ, ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಅಂದರೆ ಸರಿಯಲ್ಲ. ನಾನು 4 ನೇ ಆರೋಪಿಯನ್ನು ಯಾವತ್ತೂ ಕೂಡ ಹಾಗೂ ಎಲ್ಲಿಯೂ ಕೂಡ ಹಿಡಿದುಕೊಂಡು ಬಂದಿಲ್ಲ ಅಂದರೆ ಸರಿಯಲ್ಲ

ಮತ್ತು ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ರೀತಿ ಸಂಬಂದ ಇಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎನ್.ಜಿ.ಹೆಚ್ 2 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಪಾಟೀ ಸವಾಲುಃ ಶ್ರೀ.ಪಿ.ಜಿ.ಪಿ ವಕೀಲರು 4 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.